ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ಉಕೃನಿ/ಸಾಕೃಫ/ರೈ.ಸಿ. ಸಂ/2022–23

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ: 28–04–2022

ಇವರಿಗೆ,

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು

ವಿಷಯ: 2022–23 ನೇ ಸಾಲಿನ ರೈತಸಿರಿ ಯೋಜನೆಯಡಿ "ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನ" ನೀಡುವ ಕಾರ್ಯಕ್ರಮದಡಿ ಪ್ರಸ್ತಾವನೆಗಳನ್ನು ಸ್ವೀಕರಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಕೃಇ 114 ಕೃಯೋಕಾ 2022, ಬೆಂಗಳೂರು, ದಿನಾಂಕ: 08-04-2022
2.ಈ ಕಛೇರಿ ಪತ್ರ ಸಮ ಸಂಖ್ಯೆ ಉಕೃನಿ/ಸಾಕೃಫ/RKVY/ಸಂಸ್ಕರಣೆ/2021–22 ದಿನಾಂಕ: 26–11–2021

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2021–22ನೇ ಸಾಲಿನಲ್ಲಿ ಉಲ್ಲೇಖ- 2 ರನ್ವಯ ರೈತಸಿರಿ ಯೋಜನೆಯಡಿ ಸಿರಿಧಾನ್ಯ ಬೆಳೆದ ರೈತರಿಗೆ ಉತ್ಪಾದನಾ ಪ್ರೋತ್ಸಾಹಧನ ನೀಡುವ ಜೊತೆಗೆ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಸಹಾಯಧನ ನೀಡಲು ಸಹ ಅವಕಾಶ ಕಲ್ಪಿಸಲಾಗಿದ್ದು ಪ್ರಸ್ತಾವನೆಗಳನ್ನು ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಈ ಸಂಬಂಧ ಜಿಲ್ಲೆಗಳಿಂದ ಹೆಚ್ಚಿನ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, 2022-23 ನೇ ಸಾಲಿನಲ್ಲಿ ರೈತಸಿರಿ ಯೋಜನೆಯಡಿ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ ಘಟಕಗಳಿಗೆ ಸಹಾಯಧನವನ್ನು ಮುಂದುವರೆಸಲಾಗಿದ್ದು ಸದರಿ ಯೋಜನೆಯಡಿ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣಾ ಘಟಕ ಪ್ರಸ್ತಾವನೆಯ ಯಂತ್ರೋಪಕರಣಗಳ (End to End machinary) ಒಟ್ಟು ವೆಚ್ಚದ ಮೇಲೆ ಪ್ರೋತ್ಸಾಹಧನವಾಗಿ ಶೇ.50ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳವರೆಗೆ ಪಡೆಯಬಹುದಾಗಿರುತ್ತದೆ. ಈ ಸಂಬಂಧ ಜಿಲ್ಲೆಗಳಲ್ಲಿ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಪ್ರಸ್ತಾವನೆಗಳನ್ನು ಆಹ್ವಾನಿಸಲು ತಿಳಿಸಲಾಗಿದೆ.

ಪ್ರಸ್ತಾವನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಗಳನ್ವಯ ಪರಿಶೀಲಿಸಿ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲಾತಿಗಳೊಂದಿಗೆ ವಿವರವಾದ ಯೋಜನಾ ಪ್ರಸ್ತಾವನೆ (**Detailed Project Report**)ಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಕೃಷಿ ನಿರ್ದೇಶಕರು

F:\2022-23\Millet Processing\letter to JDA 2022-23 RKVY Processing.docx

ಪ್ರತಿಯನ್ನು,

1. ಆಯುಕ್ತರು ಜಲಾನಯನ ಇಲಾಖೆ ಇವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಅರ್ಹ ಫಲಾನುಭವಿಗಳ ಮಾಹಿತಿಗೆ ತರಲು ಕೋರಿದೆ.

2. Mission Director, NRLM ಇವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಅರ್ಹ ಫಲಾನುಭವಿಗಳ ಮಾಹಿತಿಗೆ ತರಲು ಕೋರಿದೆ.

3. Managing Director KAPPEC ಇವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಅರ್ಹ ಫಲಾನುಭವಿಗಳ ಮಾಹಿತಿಗೆ ತರಲು ಕೋರಿದೆ.

2022–23 ನೇ ಸಾಲಿನ ರೈತಸಿರಿ ಯೋಜನೆಯಡಿ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಯೋಜನೆಯ ಮಾರ್ಗಸೂಚಿಗಳು

ಯೋಜನೆಯ ಉದ್ದೇಶ:

ರಾಜ್ಯದ ಸಾವಯವ ಕೃಷಿ ಕ್ಷೇತ್ರ, ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪ್ರದೇಶ ಹಾಗೆಯೇ ಸಿರಿಧಾನ್ಯ ಪ್ರದೇಶಗಳಿಂದ ಉತ್ಪತ್ತಿಯಾಗುವ ಉತ್ಪನ್ನಗಳನ್ನು ಪೋಲಾಗದಂತೆ ಕ್ಷೇತ್ರ ಮಟ್ಟದಲ್ಲಿಯೇ ತಡೆಯಲು, ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡಲು ಹಾಗೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಲು ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳ ಸ್ಥಾಪನೆ ಸೇರಿದಂತೆ ಒಟ್ಟಾರೆಯಾಗಿ ಅವುಗಳ ಮಾರುಕಟ್ಟೆ ಬಲವರ್ಧನೆಗೆ ಉತ್ತೇಜನ ನೀಡಿ ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳನ್ನು ನಿರಂತರವಾಗಿ ಪೂರೈಸುವುದು ರೈತಸಿರಿ ಯೋಜನೆಯಡಿ ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿರುತ್ತದೆ. ಯೋಜನೆಯು ಪ್ರಸ್ತಾವನೆ ಆಧಾರಿತವಾಗಿದ್ದು ಇಲಾಖೆಯಿಂದ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೂಲಕ ಅನುಷ್ಠಾನಗೊಳಿಸಲಾಗುವುದು.

ಅರ್ಹತೆ :

ಅರ್ಹ ನವೋದ್ಯಮಿಗಳು, ರೈತ ಸಂಘಗಳು, ನೊಂದಾಯಿತ ಸ್ವ–ಸಹಾಯ ಗುಂಪುಗಳು, ರೈತ ಉತ್ಪಾದಕರ ಸಂಸ್ಥೆಗಳು (FPOs), ಖಾಸಗಿ ಉದ್ದಿಮೆದಾರರು, ಆಹಾರ ಘಟಕಗಳ ಸ್ಥಾಪನೆ ಅಥವಾ ಉದ್ದಿಮೆಯಲ್ಲಿ ಕಾರ್ಯನಿರತರು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

ನೆರವಿನ ಪ್ರಮಾಣ:

- ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರಾಂಡಿಂಗ್ ಘಟಕಗಳಿಗೆ ಯೋಜನೆಯ ಪ್ರಸ್ತಾವನೆಯ ಒಟ್ಟು ವೆಚ್ಚದ ಮೇಲೆ ಸಹಾಯಧನ ಎಲ್ಲಾ ವರ್ಗದವರು ಶೇ.50ರಷ್ಟು ಅಥವಾ ಗರಿಷ್ಠ ರೂ.10.00ಲಕ್ಷಗಳವರೆಗೆ ಪಡೆಯಬಹುದಾಗಿರುತ್ತದೆ.
- ಯೋಜನಾ ಪ್ರಸ್ತಾವನೆಯ ಒಟ್ಟು ಮೊತ್ತವು ರೂ.5.00 ಲಕ್ಷಗಳಿಗಿಂತ ಹೆಚ್ಚಾಗಿದ್ದಲ್ಲಿ ನೆರವು ಕೋರುವ ಅರ್ಜಿದಾರರು ಘಟಕ ಸ್ಥಾಪನೆ ಉದ್ದೇಶಕ್ಕಾಗಿ ಯಾವುದಾದರೂ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಗಳಿಂದ ಕಡ್ಡಾಯವಾಗಿ ಸಾಲ ಪಡೆದಿರಬೇಕು. ಇಂತಹ ಪ್ರಸಂಗಗಳಲ್ಲಿ ಸರ್ಕಾರದಿಂದ ಮಂಜೂರಾಗುವ ನೆರವನ್ನು ಬ್ಯಾಂಕ್ ಸಾಲ ಆಧಾರಿತ ಸಹಾಯಧನವಾಗಿ ಪರಿಗಣಿಸಲಾಗುವುದು.
- ಯೋಜನಾ ಪ್ರಸ್ತಾವನೆಯ ಒಟ್ಟು ಮೊತ್ತವು ರೂ.5.00ಲಕ್ಷಗಳಿಗಿಂತ ಕಡಿಮೆಯಿದ್ದಲ್ಲಿ ನೆರವು ಕೋರುವ ಅರ್ಜಿದಾರರು ಘಟಕ ಸ್ಥಾಪನೆ ಉದ್ದೇಶಕ್ಕಾಗಿ ಸ್ವಂತ ಬಂಡವಾಳ ಹೂಡಿ ಅಥವಾ ಯಾವುದಾದರೂ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಘಟಕಗಳನ್ನು ಅಳವಡಿಸಿಕೊಳ್ಳತಕ್ಕದ್ದು. ಇಂತಹ ಪ್ರಸಂಗಗಳಲ್ಲಿ ಸಹಾಯಧನವನ್ನು ಸಂಬಂಧಿಸಿದ ಫಲಾನುಭವಿ/ಅರ್ಜಿದಾರರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.
- ಯಂತ್ರೋಪಕರಣಗಳು ISI/BIS ಅಥವಾ ಇತರೆ ಯಾವುದೇ ರಾಷ್ಟ್ರೀಯ/ಅಂತರರಾಷ್ಟ್ರೀಯ ಮಾನಕ ಸಂಸ್ಥೆಗಳಿಂದ ಪ್ರಮಾಣ ಪತ್ರ ಪಡೆದಿದ್ದಲ್ಲಿ ಖರೀದಿಗೆ ಅವಕಾಶ ಕಲ್ಪಿಸುವುದು. ಅಲ್ಲದೇ ಪೂರ್ಣ

ಯಂತ್ರೋಪಕರಣವು ಹೊಂದಿರದಿದ್ದಲ್ಲಿ ಕನಿಷ್ಠ ಉಪಕರಣದ ಮುಖ್ಯಭಾಗಗಳು/ಘಟಕಗಳು ISI/BIS Mark ಹೊಂದಿರುವುದು.

- ದಿನಾಂಕ:**01–04–2021** ರ ನಂತರದ ದಿನಾಂಕದಲ್ಲಿ ಖರೀದಿಸಿ ಅಳವಡಿಸಿದ ಘಟಕಗಳಿಗೆ ಮಾತ್ರ ಸಹಾಯಧನ ಒದಗಿಸಲು ಅವಕಾಶವಿರುತ್ತದೆ.
- CFTRI/IIMR/ICRISAT/NIFTEM/DFRL ಸಂಸ್ಥೆಗಳು ಅಥವಾ ಯಾವುದೇ ಪ್ರತಿಷ್ಠಿತ ದೇಶೀಯ /ಅಂತರರಾಷ್ಟ್ರೀಯ ಸಂಸ್ಥೆಗಳಿಂದ ತಂತ್ರಜ್ಞಾನ ಅಳವಡಿಸಿ ತಯಾರಿಸಲಾದ ಯಂತ್ರೋಪಕರಣಗಳಿಗೆ ಅವಕಾಶ ಕಲ್ಪಿಸುವುದು. ಇಲ್ಲದಿದ್ದಲ್ಲಿ ಕನಿಷ್ಠ ಆ ವ್ಯಾಪ್ತಿಯ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯದ ಸಂಬಂಧಿಸಿದ ಇಂಜೀನಿಯರಿಂಗ್ ವಿಭಾಗ ಅಥವಾ ಕೋಯ್ಲೋನೊತ್ತರ ವಿಭಾಗದಿಂದ ಸದರಿ ಯಂತ್ರೋಪಕರಣದ ಬಗ್ಗೆ ತೃಪ್ತಿಕರ/ತಾಂತ್ರಿಕ ವರದಿ ಪಡೆಯುವುದು.

ಅನುದಾನ ಬಿಡುಗಡೆ:

ಅನುಮೋದಿತವಾದ ಪ್ರಸ್ತಾವನೆಗಳಿಗೆ ಘಟಕ ಅನುಷ್ಠಾನ ಪೂರ್ಣಗೊಂಡು ಕಾರ್ಯಾರಂಭದ ನಂತರ ಘಟಕ ಪರಿಶೀಲನೆ ಕೈಗೊಂಡು ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಯೋಜನಾ ಪ್ರಸ್ತಾವನೆಯಲ್ಲಿ (DPR) ಫಲಾನುಭವಿಗಳು ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲೆಗಳು :

1. ನಿಗದಿತ ನಮೂನೆಯ ಅರ್ಜಿ (**Application in Prescribed format)**
2. ಘಟಕ ಅನುಷ್ಠಾನ ನಿವೇಶನ/ಸ್ಥಳ/ಕಟ್ಟಡದ ದಾಖಲಾತಿ **(Lease/Rent/Own).**
3. ವಿವರವಾದ ಯೋಜನಾ ವರದಿ (**Detailed Project Report**).
4. ಸಂಘ ಸಂಸ್ಥೆಗಳಾಗಿದ್ದಲ್ಲಿ ನೋಂದಣಿ ಪ್ರಮಾಣ ಪತ್ರ, ಮೆಮೋರೆಂಡಮ್ ಮತ್ತು ಸಂಸ್ಥಾ ನಿವೇದನಾ ಪತ್ರ (ಆರ್ಟಿಕಲ್ಸ್ ಆಫ್. ಅಸೋಸಿಯೇಷನ್) ಹಾಗೂ ಸೊಸೈಟಿ ಬೈಲಾಗಳು (ಇದ್ದ ಪಕ್ಷದಲ್ಲಿ)/ ಪಾಲುದಾರಿಕೆ ಪತ್ರ, ಅಥವಾ ಇತರೆ ಇನ್ನಾವುದೇ ಸಂಸ್ಥೆ ನೊಂದಾಯಿಸಿದ ಪತ್ರ (**MSME Udyog Adhar Registration Certificate).**
5. ಕಟ್ಟಡ ನೀಲಿ ನಕಾಶೆಯ ನಕಲು ಮತ್ತು ಕಾರ್ಯವಿಧಾನದ ಹಂತಗಳನ್ನು ಸೂಚಿಸುವ ರೇಖಾಚಿತ್ರ (**flow diagram**).
6. ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ಮೂಲಭೂತ ಸೌಕರ್ಯ ವ್ಯವಸ್ಥೆಗೆ/ಘಟಕ ಸ್ಥಾಪನೆಗೆ ಪಡೆದ ಪರವಾನಿಗೆ ಪತ್ರ (**General Licence).**
7. ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಮಂಜುರಾತಿ ಪತ್ರ.
8. ಹಣಕಾಸು ಸಂಸ್ಥೆಯಿಂದ ಘಟಕ ಸ್ಥಾಪನೆಗೆ ಪಡೆದ ಸಾಲ ಮಂಜೂರಾತಿ ಪತ್ರ
9. ಯಂತ್ರೋಪಕರಣಗಳ ತಯಾರಕರು/ಮಾರುಕಟ್ಟೆದಾರರಿಂದ ಪಡೆದ **Quotations/Invoice**
10. ಈ ಯೋಜನೆಯಡಿ ಯಾವ ಘಟಕಗಳಿಗೆ ಸಹಾಯಧನವನ್ನು ಪಡೆಯಲಾಗುತ್ತದೆಯೋ ಆ ಘಟಕಗಳನ್ನು ಕನಿಷ್ಠ 3 ವರ್ಷಗಳ ಕಾಲ ಘಟಕದ ಕಾರ್ಯನಿರ್ವಹಣೆಯನ್ನು /ವಾಣಿಜ್ಯ ಉತ್ಪಾದನೆಯನ್ನು (**commercial production)** ಕೈಗೊಳ್ಳುವ ಬಗ್ಗೆ ಮುಚ್ಚಳಿಕೆ ಪತ್ರ ಮತ್ತು ಸಾಧ್ಯವಾಗದಿದ್ದಲ್ಲಿ ಸರ್ಕಾರದ ಸಹಾಯಧನವನ್ನು ಸರಳ ಬಡ್ಡಿ ದರದೊಂದಿಗೆ ಸರ್ಕಾರಕ್ಕೆ ಹಿಂತಿರುಗಿಸುವ ಬಗ್ಗೆ ಹಾಗು ಪ್ರಸ್ತಾವಿತ ಘಟಕಗಳ ಅನುಷ್ಠಾನಕ್ಕಾಗಿ ಸಂಬಂಧಿಸಿದ ಇತರೆ ರಾಜ್ಯ

ಮತ್ತು ಕೇಂದ್ರ ಸರ್ಕಾರದ ಇಲಾಖೆಗಳಿಂದ/ಸರ್ಕಾರಿ/ಅರೆ-ಸರ್ಕಾರಿ ಸಂಸ್ಥೆಗಳಿಂದ ಯಾವುದೇ ರೀತಿಯ ನೆರವು ಪಡೆಯದಿರುವುದರ ಬಗ್ಗೆ ಮುಚ್ಚಳಿಕೆ ಪತ್ರ (**Affidavit).**

11. ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಾದಲ್ಲಿ ಜಾತಿ ಪ್ರಮಾಣ ಪತ್ರ.
12. ಆಧಾರ್ ಹಾಗು ಪ್ಯಾನ್ ಕಾರ್ಡ್ ಪ್ರತಿ.
13. ಯಂತ್ರೋಪಕರಣಗಳು/ಯಂತ್ರೋಪಕರಣಗಳ ಪ್ರಮುಖ ಘಟಕಗಳು **ISI/BIS Mark** ಹೊಂದಿರುವ ಬಗ್ಗೆ ದಾಖಲಾತಿ.
14. ಪೂರ್ಣಗೊಂಡ ಪ್ರಸ್ತಾವನೆಗಳಿಗೆ ಅನುಷ್ಠಾನಗೊಂಡ ಘಟಕಗಳ ಛಾಯಾಚಿತ್ರಗಳೊಂದಿಗೆ ನಿಗದಿತ ನಮೂನೆಯಲ್ಲಿ ತಪಾಸಣಾ ವರದಿ

ಮೇಲ್ಕಂಡ ದಾಖಲಾತಿಗಳ ಪೈಕಿ ಕ್ರ.ಸಂ 1 ರಿಂದ 12 ರ ವರೆಗಿನ ದಾಖಲೆಗಳನ್ನು ಅರ್ಜಿಯ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸಿ ಕ್ರ.ಸಂ 13 ಮತ್ತು 14ರ ದಾಖಲೆಗಳನ್ನು ತಪಾಸಣಾ ವರದಿಯ ಜೊತೆಯಲ್ಲಿ ಸಲ್ಲಿಸುವುದು.

***